ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:01–08–2018ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/20/2018–19

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ದಾಸರಹಳ್ಳಿ ವಲಯದ ವಾರ್ಡ್ ಸಂಖ್ಯೆ:14 ಬಗಲುಗುಂಟೆ ವ್ಯಾಪ್ತಿಯಲ್ಲಿ 2017–18ನೇ ಸಾಲಿನ ಪಾಲಿಕೆಯ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–3316 ಅಡಿಯಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಜಾಬ್ ಕೋಡ್ ಪಡೆದಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸ	ಕಾಮಗಾರಿ ಹೆಸರು	ಜಾಬ್ ಸಂಖ್ಯೆ	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ
1	**Re-construction of CC drain at 7th main 11th cross surrounding 11th A cross road Bhuvaneshwari nagara in ward No.14, Bagalagunte**	014–18–000067	50.00

ಈ ಮೇಲ್ಕಾಣಿಸಿದ ಕಾಮಗಾರಿಯನ್ನು ಮಾನ್ಯ ಪಾಲಿಕೆ ಸದಸ್ಯರಾದ ಶ್ರೀ.ಕೆ.ನರಸಿಂಹನಾಯಕ್ ರವರು ಪತ್ರದಲ್ಲಿ ಕೋರಿರುವಂತೆ ಮತ್ತು ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಪ್ರಸ್ತಾಪಿಸಿದ ಕಾಮಗಾರಿಯನ್ನು ಅಂದಾಜು ಮೊತ್ತವಾದ ರೂ:50.00 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಗೆ ವಹಿಸಲು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣೆ ಕೋಶ) ಆದೇಶ ಸಂಖ್ಯೆ:ಆಇ/344/ವೆಚ್ಚ–12/2018, ದಿನಾಂಕ:06–04–2018 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್– ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018–19ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ಕಛೇರಿ ಟಿಪ್ಪಣಿ ಸಂಖ್ಯೆ:1075/2018–19, ದಿನಾಂಕ;11–07–2018ರಂತೆ ಪಾಲಿಕೆಯ ವತಿಯಿಂದ 2018–19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ:ಕೆ.ಆರ್.ಐ.ಡಿ.ಎಲ್. ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

-/-

Scanned by CamScanner

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್ ಸಂಖ್ಯೆ:14 ರಲ್ಲಿ ಪ್ರಸ್ತಾಪಿತ ಕಾಮಗಾರಿಯ ಅಂದಾಜು ಮೊತ್ತವಾದ ರೂ:50.00 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಸೂಕ್ತ ನಿರ್ಣಯ ಕೋರಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್.(ಜಿ)9147/2017-18, ದಿನಾಂಕ:27-03-2018 ರಂತೆ ಅನುಮೋದಿಸಿರುವ ಮೇರೆಗೆ ವಿಶೇಷ ಆಯುಕ್ತರು(ಯೋಜನೆ) ರವರ ಕಚೇರಿ ಸಂಖ್ಯೆ:1421/2018-19 ದಿನಾಂಕ:24-07-2018ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:24-07-2018ರ ಟಿಪ್ಪಣಿ.

ನಿರ್ಣಯ:- ವಿಶೇಷ ಆಯುಕ್ತರು(ಯೋಜನೆ)ರವರ ದಿ||24|07|18 ರ ಟಿಪ್ಪಣಿಯಲ್ಲಿ ಕಂಡಂತೆ ಅಧಿಕಾರಿಗಳೊಂದಿಗೆ ಜಂಟಿ ಸಮೀಕ್ಷೆ ನಡೆಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಇರುವುದಾಗಿ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕಾಮಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ವತಿಯಿಂದ ಕೈಗೊಳ್ಳಲು ನಿಯಮಾನುಸಾರ ಅಂದಾಜು ಪತ್ರಿಕೆ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು
ವಾರ್ಡ್‌ವ್ಯಾಪ್ತಿಯ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ನಿರ್ಣಯದ ಪರವಾಗಿ ಸಹಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರ ಸಂ	ಶ್ರೀಯುತರ ಹೆಸರು	ಪದನಾಮ	
1	ಇಮ್ರಾನ್ ಪಾಷ	ಅಧ್ಯಕ್ಷರು	
2	ಎಸ್.ಪಿ.ಹೇಮಲತಾ	ಸದಸ್ಯರು	S. P. Hemalatha
3	ದೀಪ ನಾಗೇಶ್	ಸದಸ್ಯರು	Deepa Nagesh
4	ಶ್ವೇತ ವಿಜಯಕುಮಾರ್	ಸದಸ್ಯರು	Shwetha
5	ಹೇಮಲತಾ ಸತೀಶ್. ಶೇಟ್	ಸದಸ್ಯರು	Hshet
6	ಯಶೋಧ ಲಕ್ಷ್ಮೀಕಾಂತ	ಸದಸ್ಯರು	Yashoda. L
7	ನೇತ್ರಾ ಪಲ್ಲವಿ.ಎಂ.	ಸದಸ್ಯರು	Nethra Pallavi. M
8	ಹಾ ನಾ ಭುವನೇಶ್ವರಿ (ಭುವನ)	ಸದಸ್ಯರು	Bhuvana
9	ಸುಜಾತ. ಡಿ.ಸಿ.ರಮೇಶ್	ಸದಸ್ಯರು	Sujatha
10	ಮಂಜುಳ	ಸದಸ್ಯರು	ಮಂಜುಳ
11	ಎಸ್.ಜಿ. ನಾಗರಾಜ್	ಸದಸ್ಯರು	

Scanned by CamScanner